**ನಾಗೇಶ ಜಿ. ವೈದ್ಯ**

# ಬಸ್ಸಿಗೊಂದು ಪ್ರಶಸ್ತಿ

ಮೊನ್ನೆ ಸರ್ಕಾರ ಅವಾರ್ಡ್ ನಾಮಿನೇಶನ್‌ಗೆ ಅರ್ಜಿ ಕರೆದ ಮೇಲೆ, ಈ ಬಾರಿ ಪ್ರಶಸ್ತಿಯನ್ನು ಮಹಾನ್ ವ್ಯಕ್ತಿಗಳ ಬದಲಾಗಿ, ಅದು ಮಹಾನುಭಾವರನ್ನು ರೂಪಿಸುವ ಬಸ್ಸಿಗೇ ಯಾಕೆ ನೀಡಬಾರದು ಎಂದೆನಿಸಿತು ನನಗೆ. ಅದಕ್ಕೆ ತರ್ಕವೂ ಇದೆ. ಹಾಗೆಂದು, ಪ್ರಶಸ್ತಿ ಪಡೆಯೋಕೆ ಯಾವುದೇ ತರ್ಕ ಇರಬೇಕೆಂದೇನೂ ಇಲ್ಲ ಎಂಬುದು ಎಲ್ಲರಿಗೂ ತಿಳಿದದ್ದೇ. ಇರಲಿ, ಈಗ ವಿಚಾರಕ್ಕೆ ಬರೋಣ.

ಬಸ್ಸಿಗೆ ಪ್ರಶಸ್ತಿ ನೀಡೋದ್ರಿಂದ, ಯಾವುದೋ ಒಂದು ಜಾತಿ, ಮತ, ಪಂಗಡಗಳಿಗೆ ಫೇವರ್ ಮಾಡಿದ್ವಿ ಎಂಬ ಆರೋಪ ಬರೋಕಂತೂ ಸಾಧ್ಯವೇ ಇಲ್ಲ. ಇದಕ್ಕೆ ಅಸಹಿಷ್ಣುತೆಯ ಬಣ್ಣ ಬಳಿಯೋಕೂ ಸಾಧ್ಯವಿಲ್ಲ ಬಿಡಿ.

ಮನೆ, ಆಫೀಸುಗಳ ನಡುವಿನ ದೂರದಿಂದಾಗಿ, ಪ್ರತಿಯೊಬ್ಬರೂ ಬೇಗನೆ ಮನೆಯಿಂದ ತೆರಳಿ, ತಡವಾಗಿ ಹಿಂದಿರುಗುವ ಸಂಪ್ರದಾಯ ಎಲ್ಲ ನಗರಗಳಲ್ಲಿ ವ್ಯಾಪಿಸಿಬಿಟ್ಟಿದೆ. ಇದರಿಂದಾಗಿ ಯೋಗ, ವ್ಯಾಯಾಮಕ್ಕೆ ಸಮಯವೆಲ್ಲಿ? ಮನೆಯಿಂದ, ಆಫೀಸಿನುದ್ದಕ್ಕೂ ನಿಮ್ಮನ್ನು ಕುಳಿತಲ್ಲೇ ಕುಣಿಸಿ, ನಿಮ್ಮ ಸೊಂಟಕ್ಕೆ ಬಲ ಕರುಣಿಸುವವರು ಯಾರೆಂದುಕೊಂಡಿರಿ? ನಿಮ್ಮನ್ನು, ತಿರುವಿನಲ್ಲಿ ತೂರಿಸಿ, ರಸ್ತೆಯ ಹೊಂಡಗಳಲ್ಲಿ ಕುಳಿತಲ್ಲೇ ವಾಲಿಬಾಲಿನಂತೆ ಚಿಮ್ಮಿಸಿ, ಡ್ರಮ್ಮಾಗದಂತೆ ನಿಮ್ಮ ಸ್ಲಿಮ್‌ತನವನ್ನು ಕಾಪಾಡಿಕೊಡುವ ಬಸ್ಸು ನಿಜವಾಗಿಯೂ ಅವಾರ್ಡಿಗೆ ಹಕ್ಕುದಾರನೇ. ಬಸ್ಸಿನ ಸೀಟಿನಲ್ಲಿ ಕುಳಿತು ಪ್ರಯಾಣಿಸೋದ್ರಿಂದಲೇ, ನೀವು ಆಫೀಸಿನ ಕುರ್ಚಿಯಲ್ಲಿ ಕುಳ್ಳಬಹುದಾದಷ್ಟು ಟ್ರಿಮ್ ಆಗಿದ್ದೀರಿ. ಒಪ್ಪುತ್ತೀರಿ ತಾನೇ ?

ಇನ್ನು ಪರ್ಸನ್ನು ಇಟ್ಟುಕೊಳ್ಳುವ ಚಾಳಿ ನಿಮಗಿದ್ದರೆ, ನೀವು ಒಂದಿಷ್ಟು ಅಂತಸ್ತು ಉಳ್ಳವರೇ. ಹಾಗಾಗಿ ಆಗೊಮ್ಮೆ, ಈಗೊಮ್ಮೆ ಬಸ್ಸಿನ ಸಂದಣಿಯಲ್ಲಿ, ನಿಮ್ಮ ಪರ್ಸು ಕಳುವಾಗಿಬಿಟ್ಟರೆ, ತಲೆಕೆಡಿಸಿಕೊಳ್ಳದೆ, ಅದರ ಇನ್ನೊಂದು ಮುಖ ನೋಡಿ. ಯಾರೂ ಅಗತ್ಯವಿರದೇ ಕಳ್ಳತನ ಮಾಡರೆಂದು ಪುಣ್ಯಾತ್ಮನೊಬ್ಬ ಹೇಳಿದ್ದಾನೆ. ನಿಮ್ಮ ಪರ್ಸು ಕಳುವಾಯಿತೆಂದರೆ, ಅದರ ಅಗತ್ಯವಿದ್ದ ಹಲವಾರು ಕುಟುಂಬಗಳು ಈ ಬಸ್ಸಿನಿಂದಾಗಿ ಉಪಕೃತಗೊಂಡರೆಂಬುದು ಖಚಿತ.